**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸದುರ್ಗ.**

**ಉಪಸ್ಥಿತರುಃ-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ್),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹೊಸದುರ್ಗ.

**ದಿನಾಂಕ 30 ನೇ ಜನವರಿ 2026**

**ಅಸಲು ದಾವೆ ಸಂಖ್ಯೆಃ 07/2018**

**ವಾದಿಗಳು -**

ಶ್ರೀಮತಿ ಇಂದಿರಮ್ಮ ಮತ್ತು ಇನ್ನೊಬ್ಬರು

**ವಿರುದ್ಧ**

**ಪ್ರತಿವಾದಿಯರು -**

ಹನುಮಂತಪ್ಪ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ-33**

**ವಾದಿಗಳು /ಅರ್ಜಿದಾರರು**

1(ಎ) ಶ್ರೀಮತಿ ಜಾನಕಮ್ಮ ತಂದೆ ಲೇಟ್ ಡಿ. ಕರಿಯಪ್ಪ,
ಗಂಡ ಡಿ. ಮಂಜಪ್ಪ,
ವಯಸ್ಸು ಸುಮಾರು 54 ವರ್ಷ,
ಮನೆಗೆಲಸ,
ವಾಸಃ ಕೆ. ಕುರುಬರಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು,

1(ಬಿ) ಡಿ.ಕೆ ಶಿವಪ್ಪತಂದೆ ಲೇಟ್ ಡಿ. ಕರಿಯಪ್ಪ,
ವಯಸ್ಸು ಸುಮಾರು 52 ವರ್ಷ,

1(ಸಿ) ಡಿ.ಕೆ ಮಂಜುನಾಥ ತಂದೆ ಲೇಟ್ ಡಿ. ಕರಿಯಪ್ಪ,
ವಯಸ್ಸು ಸುಮಾರು 50 ವರ್ಷ,

1(ಬಿ) ಮತ್ತು 1(ಸಿ) ನೇ ವಾದಿಗಳ ವಾಸ
ಮಂಚೇನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.
(ಅರ್ಜಿದಾರರ ಪರ ವಕೀಲರು - ಶ್ರೀ ಎಂ.ಎಸ್. ಸದ್ಯೋಜಾತ )

**ವಿರುದ್ಧ**

**ಪ್ರತಿವಾದಿಯರು /ಎದುರುದಾರರು**

1. ಹನುಮಂತಪ್ಪ ತಂದೆ ಲೇಟ್ ಭೋಗಪ್ಪ,
ವಯಸ್ಸು ಸುಮಾರು 70 ವರ್ಷ,

2. ಸಣ್ಣತಿಮ್ಮಪ್ಪ ತಂದೆ ಲೇಟ್ ಭೋಗಪ್ಪ,
ವಯಸ್ಸು ಸುಮಾರು 65 ವರ್ಷ,
ಮೃತಪಟ್ಟಿದ್ದು ಅವನ ವಾರಸುದಾರರು

2(ಎ) ಟಿ.ಕೃಷ್ಣಮೂರ್ತಿ ತಂದೆ ಲೇಟ್ ಸಣ್ಣತಿಮ್ಮಪ್ಪ,
ವಯಸ್ಸು ಸುಮಾರು 40 ವರ್ಷ,
ಸಹಾಯಕ ಅಭಿಯಂತರರು,
ವಾಟರ್ ರಿಸೋರ್ಸ್ ಡಿಪಾರ್ಟ್‌ಮೆಂಟ್,
(ಸಣ್ಣ ನೀರಾವರಿ) ಚನ್ನಗಿರಿ ರೋಡ್,
ದಾವಣಗೆರೆ ಸಿಟಿ.

2(ಬಿ) ಶ್ರೀಮತಿ ಗಿರಿಜಮ್ಮ ಗಂಡ ಕಂಚೂರಾ ಅಂಜಿನಪ್ಪ,
ತಂದೆ ಲೇಟ್ ಸಣ್ಣತಿಮ್ಮಪ್ಪ,
ವಯಸ್ಸು ಸುಮಾರು 36 ವರ್ಷ,
ಮನೆಗೆಲಸ,
ವಾಸಃ ಕಾರೆಹಳ್ಳಿ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು

2(ಸಿ) ಶ್ರೀಮತಿ ಹೊನ್ನಮ್ಮ ಗಂಡ ಟಿ. ಕೃಷ್ಣಮೂರ್ತಿ ,
(ಪೋಲೀಸ್ ಇಲಾಖೆ)

ತಂದೆ ಲೇಟ್ ಸಣ್ಣತಿಮ್ಮಪ್ಪ,
ವಯಸ್ಸು ಸುಮಾರು 32 ವರ್ಷ,
ಮನೆಗೆಲಸ,
ವಾಸಃ ಹೊಳಲ್ಕೆರೆ ಟೌನ್,

2(ಡಿ) ಶ್ರೀಮತಿ ಕಮಲಮ್ಮ ಶಿಕ್ಷಕಿ ಗಂಡ ಟಿ. ಶೇಖರಪ್ಪ,
ತಂದೆ ಲೇಟ್ ಸಣ್ಣತಿಮ್ಮಪ್ಪ,
ವಯಸ್ಸು ಸುಮಾರು 29 ವರ್ಷ,
ವಾಸಃ ವಿನಾಯಕ ಬಡಾವಣೆ,
ಹೊಸದುರ್ಗ ಟೌನ್,

2(ಇ) ಟಿ. ಮಂಜುನಾಥ,
ತಂದೆ ಲೇಟ್ ಸಣ್ಣತಿಮ್ಮಪ್ಪ,
ವಯಸ್ಸು ಸುಮಾರು 27 ವರ್ಷ,
ವ್ಯವಸಾಯ,
ವಾಸಃ ಕುಂತಕೆಂಚಯ್ಯನಹಟ್ಟಿ ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.

3. ರಾಮಪ್ಪ ತಂದೆ ಹನುಮಂತಪ್ಪ,
ವಯಸ್ಸು ಸುಮಾರು 35 ವರ್ಷ,
ವಾಸಃ ಕುಂತಕೆಂಚಯ್ಯನಹಟ್ಟಿ ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.

4. ಶ್ರೀಮತಿ ವಿನೋದಮ್ಮ ಗಂಡ ಲೇಟ್ ಕರಿಯಪ್ಪ,
ವಯಸ್ಸು ಸುಮಾರು 40 ವರ್ಷ,
ವ್ಯವಸಾಯ ,
ವಾಸಃ # 48, ನನ್ನೇಶ್ವರಸ್ವಾಮಿ ದೇವಸ್ಥಾನದ ರಸ್ತೆ,
ಎನಕಲ್ಲ್ ಮೈಸೂರು.

5. ಕೆ. ಕವಿತಾ ತಂದೆ ಲೇಟ್ ಕರಿಯಪ್ಪ,
ವಯಸ್ಸು ಸುಮಾರು 37 ವರ್ಷ,
ಬಿ.ಎ.ಎಂ.ಎಸ್. ವೈದ್ಯರು.

6. ಕೆ. ಪ್ರತಿಮಾ ತಂದೆ ಲೇಟ್ ಕರಿಯಪ್ಪ,
ವಯಸ್ಸು ಸುಮಾರು 35 ವರ್ಷ,

7. ಕೆ. ನಯನ ತಂದೆ ಲೇಟ್ ಕರಿಯಪ್ಪ,
ವಯಸ್ಸು ಸುಮಾರು 33 ವರ್ಷ,

8. ಕೆ. ಮುಕುಂದ ತಂದೆ ಲೇಟ್ ಕರಿಯಪ್ಪ,
ವಯಸ್ಸು ಸುಮಾರು 31 ವರ್ಷ,
ಎಲ್ಲರ ವಾಸಃ ಕೆ/ಆಫ್ ವಿನೋದಮ್ಮ,
ಪ್ರಥಮ ದರ್ಜೆ ಸಹಾಯಕರು,
ಮಹನಗರ ಪಾಲಿಕೆ,
ಮೈಸೂರು ಕಾರ್ಪೊರೇಶನ್ ಆಫೀಸ್
ಕುವೆಂಪು ನಗರ ಮೈಸೂರು ಜಿಲ್ಲೆ.

9. ತಿಪ್ಪೇಶಪ್ಪ ತಂದೆ ತಿಮ್ಮಪ್ಪ,
ವಯಸ್ಸು ಸುಮಾರು 75 ವರ್ಷ,

10. ಬೀರಪ್ಪ ತಂದೆ ತಿಮ್ಮಪ್ಪ,
ವಯಸ್ಸು ಸುಮಾರು 60 ವರ್ಷ,

11. ವೆಂಕಟೇಶಪ್ಪ ತಂದೆ ತಿಮ್ಮಪ್ಪ,
ವಯಸ್ಸು ಸುಮಾರು 45 ವರ್ಷ,
ಎಲ್ಲರೂ ವ್ಯವಸಾಯಗಾರರು,
ವಾಸಃ ಕುಂತಕೆಂಚಯ್ಯನಹಟ್ಟಿ ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.

(1 ನೇ ಎದುರುದಾರ ಮೃತಪಟ್ಟಿದ್ದು, ಅವನ ವಿರುದ್ಧ ದಾವೆ ಉಪಶಮನಗೊಂಡಿರುತ್ತದೆ)

(2 ರಿಂದ 8 ನೇ ಎದುರುದಾರರ ಪರ ವಕೀಲರು - ಶ್ರೀ ಬಿ.ಸಿ. ಸಿದ್ದೇಶ್ )

(9 ರಿಂದ 11 ನೇ ಎದುರುದಾರರ ಪರ ವಕೀಲರು - ಶ್ರೀ ಕೆ. ನರೇಂದ್ರಬಾಬು )

**<u>ಮಧ್ಯಂತರ ಅರ್ಜಿ ಸಂಖ್ಯೆ-33 ರ ಮೇಲೆ ಆದೇಶ</u>**

1(ಎ) ರಿಂದ 1(ಸಿ)ನೇ ವಾದಿಗಳು /1(ಎ) ರಿಂದ 1(ಸಿ)ನೇ ಅರ್ಜಿದಾರರು ಈ ಮಧ್ಯಂತರ ಅರ್ಜಿ ಸಂಖ್ಯೆ 33 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ ಸಲ್ಲಿಸಿ, ವಾದಪತ್ರದ ತಪಶೀಲಿನ ತಿದ್ದುಪಡೆ ಮಾಡಿ, 67 ನೇ ಆಸ್ತಿಯನ್ನು ಸೇರ್ಪಡೆಗೊಳಿಸಲು ಅನುಮತಿಸಬೇಕೆಂದು ಕೋರಿರುತ್ತಾರೆ.

**2.** ಈ ಮಧ್ಯಂತರ ಅರ್ಜಿಯನ್ನು 1(ಸಿ)ನೇ ವಾದಿ/1(ಸಿ)ನೇ ಅರ್ಜಿದಾರ ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣವನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

**3.** 2 ರಿಂದ 8 ನೇ ಎದುರುದಾರರು/2 ರಿಂದ 8 ನೇ ಪ್ರತಿವಾದಿಗಳು ಈ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾರೆ.

**4.** ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5.** ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ:-

ಅಂಶ-1 - 1(ಎ) ರಿಂದ 1(ಸಿ)ನೇ ವಾದಿಗಳು /1(ಎ) ರಿಂದ 1(ಸಿ)ನೇ ಅರ್ಜಿದಾರರು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ, ವಾದಪತ್ರ ತಿದ್ದುಪಡೆಗೆ ಅನುಮತಿಸಲು ಇರುವಂತಹ ಕಾರಣಗಳನ್ನು ತೋರಿಸಿದ್ದಾರೆಯೇ?

ಅಂಶ- 2- ಯಾವ ಆದೇಶ?

**6**. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ಸಕಾರಾತ್ಮಕವಾಗಿ ಮತ್ತು,

ಅಂಶ-2 - ಅಂತಿಮ ಆದೇಶದಂತೆಃ

**ಕಾರಣಗಳು**

**7.** **ಅಂಶ-1 –** ವಾದಿಗಳು ತಮ್ಮ ವಾದ ಪತ್ರದಲ್ಲಿ,ದಾವಾ ಆಸ್ತಿಗಳು ತಮ್ಮ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿರುತ್ತವೆ ಎಂದು ಆರೋಪಿಸಿ, ದಾವಾ ಆಸ್ತಿಗಳಲ್ಲಿ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಪರಿಹಾರವನ್ನು ಕೋರಿರುತ್ತಾರೆ. ಆದರೆ, 2 ಮತ್ತು 3 ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ, ವಾದಿಗಳ ತಂದೆ ಬೋಗಪ್ಪ ಮತ್ತು 1 ಹಾಗೂ 2 ನೇ ಪ್ರತಿವಾದಿಗಳು ಬಹಳ ಹಿಂದೆಯೇ ಪಾಲುವಿಭಾಗ ಮಾಡಿಕೊಂಡಿದ್ದು, ಸದರಿ ಪಾಲುವಿಭಾಗದ ನಂತರ ವಾದಿಗಳ ತಂದೆಯೂ ದಿನಾಂಕಃ 30-12-1974 ರಲ್ಲಿ ತನ್ನ ಆಸ್ತಿಗಳಿಗೆ ಸಂಬಂಧಿಸಿದಂತೆ ನೊಂದಾಯಿತ ಮೃತ್ಯು ಪತ್ರವನ್ನು 1 ಮತ್ತು 2 ನೇ ಪ್ರತಿವಾದಿಗಳ ಪರ ಬರೆದುಕೊಟ್ಟಿರುತ್ತಾನೆ ಎಂದು ತಮ್ಮ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ. ಆದರೆ, 3 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಿನಾಂಕಃ 24-08-1953 ರಲ್ಲಿ ವಾದಿಗಳ ತಂದೆ ಹಾಗೂ 9 ರಿಂದ 11 ನೇ ಪ್ರತಿವಾದಿಗಳ ತಂದೆ ಮತ್ತು 1 ಹಾಗೂ 2 ನೇ ಪ್ರತಿವಾದಿಗಳು ಆಸ್ತಿಗಳನ್ನು ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದು ತಮ್ಮ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ. ಈಗ ಅರ್ಜಿದಾರರು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ತಮ್ಮ ವಾದಪತ್ರದ ತಪಶೀಲನ್ನು ತಿದ್ದುಪಡೆ ಮಾಡಿ, 67 ನೇ ಆಸ್ತಿಯನ್ನು ಸೇರ್ಪಡೆಗೊಳಿಸಲು ಬಯಸಿರುತ್ತಾರೆ.

**8.** ವಾದಿಗಳ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಉದ್ದೇಶಿತ ತಿದ್ದುಪಡೆಯ ಮೂಲಕ ಸೇರಿಸಲು ಬಯಸಿರುವ ಆಸ್ತಿಯು ವಾದಿಗಳ ಮತ್ತು ಪ್ರತಿವಾದಿಗ ಜಂಟಿ ಕುಟುಬಂದ ಆಸ್ತಿಯಾಗಿದ್ದು, ಸದರಿ ವಿಷಯ ಇತ್ತೀಚೆಗೆ ಅರ್ಜಿದಾರರಿಗೆ ಗೊತ್ತಾಗಿದ್ದು, ಸದರಿ ಆಸ್ತಿಯು 2(ಇ)ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಕಾರಣ, ಸದರಿ ಆಸ್ತಿಯನ್ನು ದಾವೆಯಲ್ಲಿ ಸೇರ್ಪಡೆಗೊಳಿಸುವುದು ಅವಶ್ಯವಾಗಿರುತ್ತದೆ. ಆದ ಕಾರಣ, ವಾದಪತ್ರವನ್ನು ತಿದ್ದುಪಡೆ ಮಾಡಲು ಅನುಮತಿಸಬೇಕು ಎಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**9.** 2 ರಿಂದ 8 ನೇ ಪ್ರತಿವಾದಿಗಳ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಈ ದಾವೆಯ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಪ್ರತಿವಾದಿಯರು ಆರ್.ಎ. ನಂ-6/2020 ನ್ನು ಸಲ್ಲಿಸಿ, ಸದರಿ ಅಪೀಲನ್ನು ನ್ಯಾಯಾಲಯ limited purpose ಗೆ ರಿಮ್ಯಾಂಡ್ ಮಾಡಿ ಆದೇಶ ಮಾಡಿರುತ್ತದೆ. ಈಗಾಗಲೇ ನ್ಯಾಯಾಲಯವು ಹೊಸದಾಗಿ ರಚನೆಯಾಗಿರುವ ವಿವಾದಾಂಶಗಳ ಮೇಲೆ ವಿಚಾರಣೆ ಪ್ರಾರಂಭಿಸಬೇಕಾಗಿದ್ದು, ವಾದಿಯರು ಸಾಕ್ಷಿ ವಿಚಾರಣೆ ಮಾಡುವ ಬದಲು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿಯರು ದುರುದ್ದೇಶದಿಂದ ಅರ್ಜಿಯಲ್ಲಿ ನಮೂದಿಸಿರುವ ಸ್ವತ್ತನ್ನು ದಾವಾದಲ್ಲಿ ಸೇರಿಸಲು ಬಯಸಿರುವುದು ಕೇಸಿನ ಹಂತಗಳನ್ನು ವಿಳಂಭಗೊಳಿಸಲು ಮತ್ತು ಪ್ರತಿವಾದಿಯರಿಗೆ ತೊಂದರೆ ಕೊಡವ ಸಲುವಾಗಿ ಸಲ್ಲಿಸಿರುವುದರಿಂದ, ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**10**. ವಾದಿಗಳು ತಮ್ಮ ವಾದಪತ್ರದಲ್ಲಿ, ದಾವಾ ಆಸ್ತಿಗಳು ತಮ್ಮ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳು ಎಂದು ಆರೋಪಿಸಿ, ದಾವಾ

ಆಸ್ತಿಗಳಲ್ಲಿ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಪರಿಹಾರವನ್ನು ಕೋರಿದ್ದು, ಆದರೆ, 2 ಮತ್ತು 3 ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ, ವಾದಿಗಳ ತಂದೆ ಬೋಗಪ್ಪ ಮತ್ತು 1 ಹಾಗೂ 2 ನೇ ಪ್ರತಿವಾದಿಗಳು ಬಹಳ ಹಿಂದೆಯೇ ಪಾಲುವಿಭಾಗ ಮಾಡಿಕೊಂಡಿದ್ದು, ಸದರಿ ಪಾಲುವಿಭಾಗದ ನಂತರ ವಾದಿಗಳ ತಂದೆಯೂ ದಿನಾಂಕಃ 30-12-1974 ರಲ್ಲಿ ತನ್ನ ಆಸ್ತಿಗಳಿಗೆ ಸಂಬಂಧಿಸಿದಂತೆ ನೊಂದಾಯಿತ ಮೃತ್ಯು ಪತ್ರವನ್ನು 1 ಮತ್ತು 2 ನೇ ಪ್ರತಿವಾದಿಗಳ ಪರ ಬರೆದುಕೊಟ್ಟಿರುತ್ತಾನೆ ಎಂದು ತಮ್ಮ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ. ಆದರೆ, 3 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಿನಾಂಕಃ 24-08-1953 ರಲ್ಲಿ ವಾದಿಗಳ ತಂದೆ ಹಾಗೂ 9 ರಿಂದ 11 ನೇ ಪ್ರತಿವಾದಿಗಳ ತಂದೆ ಮತ್ತು 1 ಹಾಗೂ 2 ನೇ ಪ್ರತಿವಾದಿಗಳು ಆಸ್ತಿಗಳನ್ನು ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದು ತಮ್ಮ ಪ್ರತಿರಕ್ಷೆಯನ್ನು ತೆಗೆದುಕೊಂಡ ಕಾರಣ, ವಾದಿಗಳ ಮತ್ತು ಪ್ರತಿವಾದಿಗಳ ಸಂಬಂಧದ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಅಲ್ಲದೆ, ವಾದಿಗಳು ಈಗ ತಮ್ಮ ವಾದಪತ್ರದ ತಪಶೀಲನ್ನು ತಿದ್ದುಪಡೆ ಮಾಡಿ, 67 ನೇ ಆಸ್ತಿಯನ್ನು ಸೇರ್ಪಡೆಗೊಳಿಸಲು ಬಯಸಿದ್ದು, ಅಲ್ಲದೆ, ಸದರಿ ಆಸ್ತಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದರ ಪ್ರಕಾರ ಸದರಿ ಆಸ್ತಿಯು ಈಗ 2 (ಇ)ನೇ ಪ್ರತಿವಾದಿಯ ಹೆಸರಿಗೆ ಇರುವುದು ಕಂಡುಬರುತ್ತದೆ. ಅಲ್ಲದೆ, ಈ ಮಧ್ಯಂತರ ಅರ್ಜಿಯೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಸದರಿ ಆಸ್ತಿಯು 2(ಇ)ನೇ ಪ್ರತಿವಾದಿಯ ಹೆಸರಿಗೆ ಇದ್ದು, ಸದರಿ ಆಸ್ತಿಯು ವಾದಿಗಳ ಮತ್ತು 1 ರಿಂದ 8 ನೇ ಪ್ರತಿವಾದಿಗಳ ಜಂಟಿ ಕುಟುಂಬದ ಆಸ್ತಿ ಎಂದು ಹೇಳಿರುವುದನ್ನು 2 ರಿಂದ 8 ನೇ ಪ್ರತಿವಾದಿಗಳು ತಮ್ಮ ತಕರಾರಿನಲ್ಲಿ, ಕೇವಲ ವಾದಿಯರು ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಮಾತ್ರ ಹೇಳಿರುತ್ತಾರೆ ವಿನಃ ಈಗ ವಾದಿಗಳು ತಿದ್ದುಪಡೆಯ ಮೂಲಕ ಸೇರಿಸಲು ಬಯಸಿರುವ ಆಸ್ತಿಯಾದ

ಹೊಸದುರ್ಗ ತಾಲ್ಲೂಕು, ಕಸಬಾ ಹೋಬಳಿ, ಕ್ಯಾದಿಕೆರೆ ಗ್ರಾಮದ ಜಮೀನು ರಿ.ಸರ್ವೆ ನಂ-21/1 ವಿಸ್ತೀರ್ಣ 1 ಗುಂಟೆ ಖರಾಬು ಸೇರಿ ಒಟ್ಟು 1 ಎಕರೆ ಜಮೀನು 2(ಇ)ನೇ ಪ್ರತಿವಾದಿಯ ಸ್ವಯಾರ್ಜಿತವಾದ ಆಸ್ತಿಯಿಂದಾಗಲೀ ಅಥವಾ ಸದರಿ ಆಸ್ತಿಯಲ್ಲಿ ವಾದಿಯರಿಗೆ ಹಿಸ್ಸೆಯ ಹಕ್ಕು ಇಲ್ಲ ಎಂದು ಹೇಳಿಲ್ಲ. ಆದ್ದರಿಂದ, ಉಭಯ ಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಎಲ್ಲಾ ಪ್ರಶ್ನೆಗಳನ್ನು ಈ ನ್ಯಾಯಾಲಯ ಪರಿಣಾಮಕಾರಿಯಾಗಿ ಹಾಗೂ ಅಂತಿಮವಾಗಿ ನ್ಯಾಯ ನಿರ್ಣಯಿಸುವ ಸಲುವಾಗಿ ವಾದಿಗಳು ತಮ್ಮ ವಾದಪತ್ರದ ತಪಶೀಲನ್ನು ತಿದ್ದುಪಡಿಗೆ ಅನುಮತಿಸುವುದು ಅವಶ್ಯವಾಗಿರುತ್ತದೆ. ಅಲ್ಲದೆ ಉದ್ದೇಶಿದ ತಿದ್ದುಪಡಿಯಿಂದ ದಾವೆಯ ಸ್ವರೂಪ ಮತ್ತು ದಾವಾ ಕಾರಣ ಬದಲಾವಣೆಗೊಳ್ಳುವುದಿಲ್ಲ. ಅಲ್ಲದೇ, ಉದ್ದೇಶಿತ ತಿದ್ದುಪಡಿಗೆ ಅನುಮತಿಸುವುದರಿಂದ 2 ರಿಂದ 8 ನೇ ಪ್ರತಿವಾದಿಗಳಿಗೆ ಯಾವುದೇ ರೀತಿ ನಷ್ಟ ಮತ್ತು ಅನ್ಯಾಯ ಉಂಟಾಗುವುದಿಲ್ಲ. ಅಲ್ಲದೆ, ಸದರಿ ಉದ್ದೇಶಿತ ತಿದ್ದುಪಡೆಯಿಂದ ಸೇರಿಸಲು ಬಯಸಿರುವ ಆಸ್ತಿಯ ಮೇಲೆ ಪಾಟಿಸವಾಲನ್ನು ಮಾಡುವ ಸಂಪೂರ್ಣ ಹಕ್ಕನ್ನು ಹಾಗೂ ಈ ಉದ್ದೇಶಿತ ತಿದ್ದುಪಡೆಯಾದ ನಂತರ, ಸದರಿ ತಿದ್ದುಪಡೆಗೆ ಸಂಬಂಧಿಸಿದಂತೆ ಹೆಚ್ಚುವರಿ ಲಿಖಿತ ಹೇಳಿಕೆಯನ್ನು ಸಲ್ಲಿಸುವ ಎಲ್ಲಾ ಹಕ್ಕು ಮತ್ತು ಅಧಿಕಾರವನ್ನು ಪ್ರತಿವಾದಿಗಳು ಹೊಂದಿರುವ ಕಾರಣ, ಉದ್ದೇಶಿತ ತಿದ್ದುಪಡಿಗೆ ಅನುಮತಿಸುವುದು ಕಾನೂನು ಮತ್ತು ನ್ಯಾಯದ ಹಿತದೃಷ್ಟಿಯಿಂದ ಅವಶ್ಯವಾಗಿರುತ್ತದೆ.

**11**. ವಾದಿಗಳ ಮತ್ತು ಪ್ರತಿವಾದಿಗಳ ಪರ ಈಗಾಗಲೇ ಸಂಪೂರ್ಣ ಸಾಕ್ಷಿ ವಿಚಾರಣೆ ಮುಕ್ತಾಯಗೊಂಡು, ಈ ನ್ಯಾಯಾಲಯವು ಈ ದಾವೆಯನ್ನು ದಿನಾಂಕಃ 13-12-2019 ರಂದು ಅಂತಿಮವಾಗಿ ಇತ್ಯರ್ಥಪಡಿಸಿ, ವಾದಿಯರ ದಾವೆಯನ್ನು ಭಾಗಶಃ ಡಿಕ್ರಿಗೊಳಿಸಿರುತ್ತದೆ. ಸದರಿ ತೀರ್ಪು ಮತ್ತು ಡಿಕ್ರಿಯಿಂದ ನೊಂದುಕೊಂಡ 1, 2(ಎ)ರಿಂದ

(ಇ),3 ರಿಂದ 8 ನೇ ಪ್ರತಿವಾದಿಗಳು ಚಿತ್ರದುರ್ಗದ ಮಾನ್ಯ 2 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಆರ್.ಎ.ನಂ-06/2020 ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯು ದಿನಾಂಕಃ 24-11-2022 ರಂದು ಇತ್ಯರ್ಥಗೊಂಡು, ಈ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಪುನರ್ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಕಳುಹಿಸಿದ ನಂತರ, 9 ರಿಂದ 11 ನೇ ಪ್ರತಿವಾದಿಗಳು ಸದರಿ ಆರ್.ಎ.ನಂ-06/2020 ರ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ, ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯ ಬೆಂಗಳೂರು ನಲ್ಲಿ ಎಂ.ಎಸ್.ಎ ನಂ-136/2023 ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯು ದಿನಾಂಕಃ29-08-2025 ರಂದು ಇತ್ಯರ್ಥಗೊಂಡಿರುತ್ತದೆ. ಅಲ್ಲದೆ, ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯವು ತಿದ್ದುಪಡೆಗೆ ಅನುಮತಿಸಲು ಬರುವುದಿಲ್ಲವೆಂದು ಅಥವಾ ಆ ರೀತಿ ತಿದ್ದುಪಡೆಗೆ ಕೇಳಬಾರದು ಎಂದು ತನ್ನ ತೀರ್ಪಿನಲ್ಲಿ ಹೇಳಿಲ್ಲ. ಆದರೆ, ಈಗ ಈ ಹಂತದಲ್ಲಿ ಈ ಉದ್ದೇಶಿತ ತಿದ್ದುಪಡಿಗೆ ವಾದಿಗಳು ಕೇಳಿದ್ದು, ಆದರೆ ಸಾಕ್ಷಿ ವಿಚಾರಣೆ ಪ್ರಾರಂಭಗೊಳ್ಳುವ ಪೂರ್ವದಲ್ಲಿ, ಏಕೆ ಈ ಉದ್ದೇಶಿತ ತಿದ್ದುಪಡಿಗೆ ಕೇಳಲ್ಲಿಲ್ಲ ಮತ್ತು ಆ ರೀತಿ ಕೇಳದೆ ಇರುವುದಕ್ಕೆ ಇದ್ದಂತಹ ಸಾಕಷ್ಟು ಕಾರಣಗಳನ್ನು ಹೇಳದೇ ಕೇವಲ ಸದರಿ ಆಸ್ತಿ ತಮ್ಮ ಮತ್ತು ಪ್ರತಿವಾದಿಗಳ ಜಂಟಿ ಕುಟುಂಬದ ಆಸ್ತಿ ಎನ್ನುವ ಸಂಗತಿ ಇತ್ತೀಚೆಗೆ ತನಗೆ ಗೊತ್ತಾಗಿರುತ್ತದೆ ಎಂದು ಈ ಮಧ್ಯಂತರ ಅರ್ಜಿಯೊಂದಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುತ್ತಾನೆ. ಆದರೆ, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ ಹೇಳಿದಂತೆ, ಈ ಉದ್ದೇಶಿತ ತಿದ್ದುಪಡಿಗೆ ಸಾಕ್ಷಿವಿಚಾರಣೆ ಪ್ರಾರಂಭಗೊಳ್ಳುವ ಪೂರ್ವದಲ್ಲಿ ಕೇಳಬೇಕಾಗಿತ್ತು, ಆದರೆ ಆ ರೀತಿ ಕೇಳದೆ ಇರುವುದಕ್ಕೆ ಇದ್ದಂತಹ ಸಾಕಷ್ಟು ಕಾರಣಗಳನ್ನು ವಾದಿಗಳು ಹೇಳಿಲ್ಲ, ಆದರೂ ಸಹ ಈ ಉದ್ದೇಶಿತ ತಿದ್ದುಪಡಿಯು ಉಭಯಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಎಲ್ಲಾ

ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಹಾಗೂ ಅಂತಿಮವಾಗಿ ನ್ಯಾಯ ನಿರ್ಣಯಿಸುವ ಸಲುವಾಗಿ ಅವಶ್ಯವಾಗಿರುತ್ತದೆ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ಹೆಚ್ಚಿನ ಖರ್ಚಿನ ಮೇಲೆ ಪುರಸ್ಕರಿಸುವುದು ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದ ಅವಶ್ಯವಾಗಿರುವುದರಿಂದ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಇರುವಂತಹ ಕಾರಣಗಳನ್ನು 1(ಎ) ರಿಂದ 1(ಸಿ)ನೇ ಅರ್ಜಿದಾರರು/1(ಎ) ರಿಂದ 1(ಸಿ)ನೇ ವಾದಿಯರು ತೋರಿಸಿರುವ ಕಾರಣ, **ಅಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**12.** **ಅಂಶ-2** – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗಾಗಿ ಈ ಕೆಳಕಂಡಂತೆ ಮಾಡಿದಃ

**ಆದೇಶ**

1(ಎ) ರಿಂದ 1(ಸಿ)ನೇ ಅರ್ಜಿದಾರರು/1(ಎ) ರಿಂದ 1(ಸಿ)ನೇ ವಾದಿಯರ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ, ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ - 33 ನ್ನು 1,000/- ರೂಗಳ ಖರ್ಚಿನ ಮೇಲೆ ಪುರಸ್ಕರಿಸಲಾಗಿದೆ.

ವಾದಿಗಳು ತಮ್ಮ ವಾದ ಪತ್ರವನ್ನು ಮುಂದಿನ ಸುನಾವಣೆಯ ದಿನಾಂಕದಂದು ಅಥವಾ ಅದರೊಳಗೆ ತಿದ್ದುಪಡಿ ಮಾಡಬೇಕೆಂದು ನಿರ್ದೇಶಿಸಿ, ಆದೇಶಿಸಿದೆ.

ಖರ್ಚಿನ ಮೊತ್ತ 1,000/-ಗಳನ್ನು ವಾದಿಗಳು 2 ರಿಂದ 8 ನೇ ಪ್ರತಿವಾದಿಗಳಿಗೆ ಕೊಡತಕ್ಕದ್ದು.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ, ಇಂದು ದಿನಾಂಕ **30 ನೇ ಜನವರಿ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-

**(ವೈ. ಕೆ. ಬೇನಾಳ),**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಹೊಸದುರ್ಗ.**